# ನನ್ನ ಕೈಲಾಸ ಮಾನಸ ಸರೋವರ ಯಾತ್ರೆ

**ಆರ್. ಜಾನಕಮ್ಮ**

ಟಿಬೆಟ್ಟಿನಲ್ಲಿರುವ ಕೈಲಾಸ ಹಾಗೂ ಮಾನಸ ಸರೋವರ ಯಾತ್ರೆ ಅತ್ಯಂತ ರೋಚಕವಾದ ಅನುಭವಗಳನ್ನು ಮಾಡಿಕೊಡುತ್ತದೆ ಎಂಬುದನ್ನು ವಿವರಿಸುವ ಅನೇಕ ಗ್ರಂಥಗಳಿವೆ. ಈ ಯಾತ್ರೆಯ ಹಿಂದೆ ಯಾತ್ರಿಕನ ಶ್ರದ್ಧೆ, ಭಕ್ತಿ, ಆಧ್ಯಾತ್ಮಿಕ ಭಾವನೆಗಳು ಮಡುಗಟ್ಟಿರುವುದರಿಂದ, ಈ ಯಾತ್ರೆ ಅವರಿಗೆ ಜೀವನದುದ್ದಕ್ಕೂ ಮರೆಯಲಾಗದ ರೀತಿ ಉಳಿದಿರುತ್ತವೆ. ಈ ಬಗ್ಗೆ ಬರೆದಿರುವ ಲೇಖಕಿ, ಮೈಸೂರು ಆಶ್ರಮದ ಭಕ್ತರು. ಹೈಸ್ಕೂಲು ಮುಖ್ಯೋಪಾಧ್ಯಾಯಿನಿಯಾಗಿ ಅವರು ಸೇವೆ ಸಲ್ಲಿಸಿದ್ದು, ಈಗ ನಿವೃತ್ತರಾಗಿದ್ದಾರೆ.

ನನಗೆ ಮೊದಲಿನಿಂದಲೂ ಪ್ರಕೃತಿಯ ಬಗ್ಗೆ ಅಪಾರ ಪ್ರೀತಿ. ಶಾಲೆಯಲ್ಲಿ ಪಾಠ ಮಾಡುವಾಗ, ಬೆಟ್ಟ ಗುಡ್ಡಗಳು ಪ್ರಕೃತಿಯ ಸೌಂದರ್ಯ ಇವುಗಳನ್ನು ಕಾಣುವ ಕಾತರತೆ ಸಹಜವಾಗಿಯೇ ಬೆಳೆದು ಬಂದಿತ್ತು. ಆದರೆ ಅವಕಾಶಗಳೇ ಸಿಗಲಿಲ್ಲ. ನಿವೃತ್ತಿಯ ನಂತರ ಸಿಕ್ಕ ಮೊದಲ ಅವಕಾಶವೇ ಕೈಲಾಸ ಮಾನಸ ಸರೋವರ ಯಾತ್ರೆ. ಬಾಲ್ಯದಿಂದಲೇ ಹಿಮಾಲಯವೆಂದರೆ ಏನೋ ಆಕರ್ಷಣೆ, ಆಸಕ್ತಿ. ಇದಕ್ಕೆ ಅನುಕೂಲವಾಗಿ ಸ್ನೇಹಿತರೂ ಈ ಪ್ರವಾಸದ ವಿಷಯ ಪ್ರಸ್ತಾಪಿಸಿದರು. ಹಿಂದೆ ಓದಿದ 'ಪಾಂಡವರ ಸ್ವರ್ಗಾರೋಹಣ ಪರ್ವ, ಯಮದ್ವಾರ, ಕೈಲಾಸ ಪರ್ವತ' ಇದೆಲ್ಲದರ ನೆನಪು ಮರುಕಳಿಸಿತು. ಈಗ ಪ್ರತ್ಯಕ್ಷ ನೋಡುವ ಅವಕಾಶ! ಅಭಿಲಾಷೆ ನೆರವೇರಿ ಧನ್ಯವಾಗುವ ಸುಸಂದರ್ಭ !

ಆತ್ಮೀಯ ಗೆಳತಿ ತಾರಾ , ಬೆಂಗಳೂರಿನ ಶಂಕರ ಟ್ರೆಕ್ಸ್ ರವರು ಆಯೋಜಿಸಿದ ಮಾನಸ ಸರೋವರ ಯಾತ್ರೆಯ ಬಗ್ಗೆ ತಿಳಿಸಿ, ನನಗೂ ಇದರಲ್ಲಿ ಪಾಲ್ಗೊಳ್ಳಲು ಹೇಳಿದರು. ಆಯೋಜಕರ ಹಿನ್ನೆಲೆ, ಅವರು ತೆಗೆದುಕೊಳ್ಳುವ ಮುತುವರ್ಜಿ ಇತ್ಯಾದಿಗಳ ಬಗ್ಗೆ ಉತ್ತಮ ಅಭಿಪ್ರಾಯಗಳು ಇರುವುದನ್ನು ಅವರು ಖಚಿತಪಡಿಸಿಕೊಂಡಿದ್ದರು. ಈ ಸದವಕಾಶ ಖಂಡಿತ ಈಶ್ವರ ಕೃಪೆ. ಜನ್ಮಾಂತರದ ಪುಣ್ಯ ವಿಶೇಷ. 'ತೇನ ವಿನಾ ತೃಣಮಪಿ ನ ಚಲತಿ' ಎಂಬ ಸಾಲುಗಳು ನೆನಪಾದವು. ಹಾಗಾಗಿ ಕೂಡಲೇ ಹೊರಡುವ ನಿರ್ಧಾರ ಮಾಡಿದೆ. ಪೂರ್ವ ತಯಾರಿ ಪ್ರಾರಂಭಿಸಿಯೇ ಬಿಟ್ಟೆ.

ಹಿಮಾಲಯ ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ಬೇರು. ಯುಗಯುಗಗಳಿಂದಲೂ ನಮ್ಮ ಜನರ ಆಧ್ಯಾತ್ಮಿಕ ಜೀವನದ ಮೇಲೆ ಅಗಾಧ ಪ್ರಭಾವ ಬೀರಿ ತನ್ನತ್ತ ಆಕರ್ಷಿಸುತ್ತಲೇ ಇದೆ. ಇದರ ಉತ್ತರ ಭಾಗದಲ್ಲಿರುವ ಕೈಲಾಸ ಪರ್ವತ ಸ್ವಯಂ ಶಿವನ ಆವಾಸ ಎಂದೇ ನಮ್ಮ ಅಚಲ ನಂಬಿಕೆ. ಜನರ ಬಾಯಲ್ಲಿ ಇದು ಬೆಳ್ಳಿಬೆಟ್ಟ ಎಂದು ಪ್ರಸಿದ್ಧ. ಕೈಲಾಸ ಪರ್ವತವನ್ನು ಮೇರು, ಸುಮೇರು, ಸುಮಘ್ನ, ಹೇಮಾದ್ರಿ, ರತ್ನಸಾನು, ಕರ್ಣಿಕಾಚಲ, ಅಂಬರಾದ್ರಿ, ದೇವಪರ್ವತ, ಗಾನಪರ್ವತ, ಸ್ವಯಂಭೂ ಎಂದು ಮುಂತಾಗಿ ಹೆಸರಿಸಲಾಗಿದೆ.

ಇಲ್ಲಿಂದಲೇ ದೇವನದಿ ಗಂಗೆ, ಸಿಂಧು, ಶತದ್ರು, ಕರ್ನಾಲಿ ಹಾಗೂ ಬ್ರಹ್ಮಪುತ್ರಗಳ ಉಗಮ. ಗಂಗೆ ಮತ್ತು ಬ್ರಹ್ಮಪುತ್ರಾ ನದಿಗಳು ಪೂರ್ವಕ್ಕೆ ಹರಿದು ಗಂಗಾಸಾಗರವನ್ನು ಸೇರಿದರೆ,



ಉಳಿದವು ಪಶ್ಚಿಮಾಭಿಮುಖವಾಗಿ ಹರಿದು ಸಿಂಧೂ ಸಾಗರವನ್ನು ಸೇರುತ್ತವೆ. ಕೈಲಾಸ ಪರ್ವತ, ಸಮುದ್ರ ಮಟ್ಟದಿಂದ ೨೨೦೦೦ ಅಡಿಗೂ ಎತ್ತರವಿದ್ದು ೨೫೦೦ ಚ.ಕಿ.ಮೀ. ಪ್ರದೇಶವನ್ನು ವ್ಯಾಪಿಸಿದೆ. ಇದೇ ರೀತಿ ಪಾವಿತ್ರ್ಯ ಹೊಂದಿರುವ ಮಾನಸ ಸರೋವರ ಇಲ್ಲಿಗಿಂತ ೧೪೦೦೦ ಅಡಿಗಳಷ್ಟು ಕಡಿಮೆ ಎತ್ತರದಲ್ಲಿದೆ. ವರ್ಷದ ಒಂಬತ್ತು ತಿಂಗಳೂ ಹಿಮಾವೃತವಾಗಿರುವ ಈ ಪ್ರದೇಶಗಳಲ್ಲಿ ಕೇವಲ ಬೇಸಿಗೆಯ ಮೂರು ತಿಂಗಳು ಮಾತ್ರ ಯಾತ್ರೆ ಸಾಧ್ಯ.

ನಮ್ಮ ಭಾರತ ಸನಾತನ ಸಂಸ್ಕೃತಿಯ ಪುಣ್ಯಭೂಮಿ. ಕೈಲಾಸ – ಮಾನಸ ಸರೋವರ ನಮ್ಮ ಸಂಸ್ಕೃತಿಯ ಮೂಲ ನೆಲೆ. ಇದರ ಮೇಲೆ ಜನರಲ್ಲಿ ಅಪಾರ ಭಕ್ತಿ, ಗೌರವ, ಶ್ರದ್ಧೆ , ಹಾಗೂ ಉನ್ನತ ಸ್ಥಾನ. ಈ ಯಾತ್ರೆ ಪೂರೈಸುವುದೇ ಜೀವನದ ಸರ್ವೋತ್ಕೃಷ್ಟ ಗುರಿ. ಸನಾತನ ಸಂಸ್ಕೃತಿಯಲ್ಲಿ ಮಾನಸೆಯನ್ನು ಮಾತೃಸ್ಥಾನದಲ್ಲಿ , ಕೈಲಾಸವನ್ನು ಪಿತೃಸ್ಥಾನದಲ್ಲಿ ಇರಿಸಿದ್ದಾರೆ. 'ಕೈಲಾಸ ಶಿಖರೇ ರಮ್ಯೇ ಶಂಕರಸ್ಯ ಶಿವಾಲಯೇ..' ಎಂದೇ ನಂಬಿಕೆ. ಔನ್ನತ್ಯಕ್ಕೆ ರೂಪಕ, ಪಾವಿತ್ರ್ಯತೆಗೆ ಮೂರ್ತರೂಪ, ಶ್ರೇಷ್ಠತೆಯ ಸಂಕೇತ – ಈ ಕೈಲಾಸ.

ಕೈಲಾಸ ಪರ್ವತ ಪ್ರದೇಶ ಇರುವುದು ಚೈನಾ ದೇಶದ ಆಡಳಿತ ಇರುವ ಟಿಬೆಟ್ ಭಾಗದಲ್ಲಿ. ಇಲ್ಲಿಗೆ ಎರಡು ಮಾರ್ಗವಾಗಿ ತಲುಪಬಹುದು. ಒಂದು, ಉತ್ತರಾಖಂಡದ ಮೂಲಕ ಕಾಲುನಡಿಗೆಯಲ್ಲಿ. ಇನ್ನೊಂದು ನೇಪಾಳದ ಕಾಠ್ಮಂಡು ಮೂಲಕ ವಾಯು ಮಾರ್ಗ. ಭಾರತದಿಂದ ಕಾಠ್ಮಂಡುವಿಗೆ ವಿಮಾನ ಪ್ರಯಾಣ.

ಅಲ್ಲಿಂದ ಬಸ್ಸುಗಳಲ್ಲಿ ಮಾನಸ ಸರೋವರ ತಲುಪುವುದು ಮೊದಲ ಹಂತ. ನಂತರ ಕಾಲ್ನಡಿಗೆ ಅಥವಾ ಕುದುರೆಗಳ ಮೇಲೆ ಪರಿಕ್ರಮ. ಇದಕ್ಕೆ ೩ ಹಗಲು ೨ ರಾತ್ರಿ ಹಿಡಿಯುತ್ತದೆ. ಕಾಠ್ಮಂಡು ಮೂಲಕ ಯಾತ್ರೆಗೆ ಒಟ್ಟು ೧೩ ದಿನಗಳು ಬೇಕಾಗುತ್ತವೆ. ಸುಮಾರು ೯೦೦ ಕಿ.ಮೀ. ಪ್ರಯಾಣ.

### ಪೂರ್ವಭಾವಿ ತಯಾರಿಗಳು

ಮೈಸೂರಿನಿಂದ ನಮ್ಮ ತಂಡದಲ್ಲಿದ್ದವರು ನಾನು, ಗೆಳತಿ ರೇಣುಕಾ, ನಿರ್ಮಲಾ, ತಾರಾ ಹಾಗೂ ಅವರ ಪತಿ ಸೇತುರಾಂ ಸೇರಿದಂತೆ ಐದು ಜನ. ಆಯೋಜಕರು ಯಾತ್ರೆಗಾಗಿ ಕೊಟ್ಟ ಸೂಚನೆಗಳು ತುಂಬಾ ಉಪಯುಕ್ತ ಮತ್ತು ಅರ್ಥಪೂರ್ಣವಾಗಿದ್ದವು: ಯಾತ್ರೆ ಒಂದು ಆಧ್ಯಾತ್ಮಿಕ ಅಭಿಯಾನ. ಎಲ್ಲವೂ ಶಿವನ ಕೃಪೆ. ಶಿವನ ಧ್ಯಾನಕ್ಕೇ ಮಹತ್ವ. ಮಾತು ಕಡಿಮೆಯಾದಷ್ಟೂ ಅನುಕೂಲ. ಅಹಂಭಾವ ಬೇಡ.

ಯಾತ್ರೆಗೆ ಸಿದ್ಧತೆಯಾಗಿ ಸಾಕಷ್ಟು ವ್ಯಾಯಾಮ, ದೀರ್ಘ ನಡಿಗೆಯ ಅಭ್ಯಾಸ, ಒಣ ಹಣ್ಣುಗಳ ಸೇವನೆಯನ್ನೂ ಹೇಳಿದ್ದರು. ಬೆಚ್ಚನೆಯ ಉಡುಪುಗಳು, ಕೈಗವಸು, ಉಣ್ಣೆಯ ಟೋಪಿ, ಬೂಟುಗಳು ಇತ್ಯಾದಿಗಳನ್ನು ತೆಗೆದುಕೊಳ್ಳಲು ತಿಳಿಸಿದ್ದರು. ಅಲ್ಲದೆ ಆವಶ್ಯಕ ಔಷಧಿಗಳನ್ನೂ ಮರೆಯದೆ ತರಲು ಹೇಳಿದ್ದರು.

ಪ್ರಯಾಣಕ್ಕೆ ಅಗತ್ಯವಾದ ಪಾಸ್‌ಪೋರ್ಟ್, ವೈದ್ಯರ ಪ್ರಮಾಣ ಪತ್ರ, ಆಧಾರ ಕಾರ್ಡ್ ಇತ್ಯಾದಿಗಳು ಅನಿವಾರ್ಯ.

### ಯಾತ್ರೆ ಪ್ರಾರಂಭ

ಅಂತೂ ಬಹು ನಿರೀಕ್ಷಿತ ಪ್ರಯಾಣದ ದಿನ ಬಂದೇ ಬಿಟ್ಟಿತು. ೨೦೧೪, ಜೂನ್ ೧೬ ಮರೆಯಲಾಗದ ದಿನ. ದೇವರಿಗೆ ನಮಿಸಿ ಹೊರಟೆವು. ನಮ್ಮ ಪ್ರಯಾಣ ಮೊದಲು ಬೆಂಗಳೂರಿನಿಂದ ದೆಹಲಿಗೆ, ವಿಮಾನದಲ್ಲಿ. ಅಲ್ಲಿಂದ ಬೇರೆಯೇ ವಿಮಾನದಲ್ಲಿ ಕಾಠ್ಮಂಡುವಿಗೆ. ತಲುಪಿದ್ದು ಸಂಜೆ ೫ ಘಂಟೆಗೆ.

ವಿಮಾನ ಪ್ರಯಾಣದ ಅನುಭವ ಅನನ್ಯ. ಹಿಮಾಲಯದ ನಯನ ಮನೋಹರ ದೃಶ್ಯಗಳು, ಹಿಮದ ಹಚ್ಚಡ ಹೊದ್ದುಕೊಂಡ ಉನ್ನತ ಶಿಖರಗಳ ನೋಟ, ಇಡೀ ಆಗಸವೆಲ್ಲ ಬಿಳಿ ಮೋಡಗಳು ಆವರಿಸಿ, ವಿಮಾನ ಹತ್ತಿಯ ರಾಶಿಯ ಮೇಲೆ ಸಾಗುತ್ತಿದೆಯೆನ್ನುವಂತೆ. ಕೆಲವೊಮ್ಮೆ ವಿಮಾನ ನಿಂತಲ್ಲೇ ಇದ್ದಂತೆ! ನೇಪಾಳಕ್ಕೆ ಇಳಿಯುತ್ತಿದ್ದಂತೆ ಪ್ರಕೃತಿಯ ಸೌಂದರ್ಯದ ಅದ್ಭುತ ದೃಶ್ಯ.

ಅಂದು ನಮಗೆ ಕಾಠ್ಮಂಡುವಿನಲ್ಲಿ ಎವೆರಸ್ಟ್ ಪಂಚತಾರಾ ಹೋಟೆಲ್‌ನಲ್ಲಿ ವಾಸ್ತವ್ಯ. ಸುಂದರ ಸ್ವಾಗತಕಾರಿಣಿಯಿಂದ ನಮಗೆ ಆತ್ಮೀಯ ಸ್ವಾಗತ.

### ಕಾಠ್ಮಂಡುವಿನಲ್ಲಿ ಸ್ಥಾನೀಯ ಪ್ರೇಕ್ಷಣೀಯ ಸ್ಥಳಗಳ ದರ್ಶನ

ಮೊದಲು ನಾವು ಹೋಗಿದ್ದು ಪಶುಪತಿನಾಥನ ಸನ್ನಿಧಾನಕ್ಕೆ. ಇದು ಇಲ್ಲಿಯ ಅತ್ಯಂತ ಪ್ರಾಚೀನ, ಪ್ರಸಿದ್ಧ ಕ್ಷೇತ್ರ. ವಿಶಿಷ್ಟವಾದ ವಾಸ್ತುಶಿಲ್ಪದ ಭವ್ಯ ಮಂದಿರ. ಹಿಂದೂಗಳ ದೇವ, ದೇವತೆಗಳ ಹಾಗೂ ಆಚಾರ್ಯ ಶಂಕರರೇ ಮೊದಲಾದ ಗುರುಗಳ ವಿಗ್ರಹಗಳೂ ಸೇರಿದಂತೆ ಪಶುಪತಿನಾಥನ ಭವ್ಯವಾದ, ಚತುರ್ಮುಖ ಮೂರ್ತಿ ಇಲ್ಲಿಯ ಪ್ರಮುಖ ಆಕರ್ಷಣೆ. ಇಂತಹ ಶಿವಲಿಂಗ ಬಹಳ ಅಪರೂಪ. ಇಲ್ಲಿಯ ಅರ್ಚಕರೂ ಕನ್ನಡನಾಡಿನವರೇ. ತುಂಬಾ ಆದರದಿಂದ ನಮ್ಮಿಂದ ಅಭಿಷೇಕ, ಪೂಜಾದಿಗಳನ್ನು ಮಾಡಿಸಿ ಪ್ರಸಾದ ಕೊಟ್ಟಾಗ, ನಮಗೆಲ್ಲರಿಗೂ ಧನ್ಯತೆಯ ಭಾವ! ಏನೋ ತೃಪ್ತಿ, ಸಾರ್ಥಕತೆ! ಶಿವನಿಗೆ ಮನಃಪೂರ್ವಕವಾಗಿ ನಮಿಸುತ್ತ, ಮುಂದಿನ ಯಾತ್ರೆಯ ಯಶಸ್ಸಿಗಾಗಿ ಪ್ರಾರ್ಥಿಸುತ್ತ ಅಲ್ಲಿಂದ ನಿರ್ಗಮಿಸಿದೆವು.

ನಮ್ಮ ಮುಂದಿನ ಪ್ರಯಾಣ ಪ್ರಕೃತಿ ಸೌಂದರ್ಯಕ್ಕೆ ಹೆಸರಾದ ಪೊಖರಾಗೆ. ಹವಾನಿಯಂತ್ರಿತ ಬಸ್ಸುಗಳಲ್ಲಿ, ಸಂಜೆ ಹೊತ್ತಿಗೆ ಪೊಖರಾ ತಲುಪಿದೆವು. ಪ್ರಯಾಣದ ವೇಳೆ ಇಕ್ಕೆಲಗಳಲ್ಲಿಯೂ ಮರೆಯಲಾಗದ ಹಸಿರಿನ ಸಿರಿ. ಸಾಲುಸಾಲು ಸುಂದರ ಬೆಟ್ಟಗಳು. ವಿಶಾಲವಾದ ನಯನಮನೋಹರ, ಗಾಢ ನೀಲಿ ಜಲರಾಶಿಯ ಇಲ್ಲಿನ ಸರೋವರ ನೋಡಲೆಂದೇ ಸಾವಿರಾರು ಪ್ರವಾಸಿಗಳು ಇಲ್ಲಿಗೆ ಬರುತ್ತಾರೆ. ಅನ್ನಪೂರ್ಣ, ಧವಳಗಿರಿ ಪರ್ವತ ಶೃಂಗಗಳನ್ನು ಇಲ್ಲಿಂದ ಕಾಣಬಹುದು. ಇಲ್ಲಿನ ಸೂರ್ಯೋದಯವನ್ನು ನೋಡಲು ಮುಂಜಾನೆ ೪ ಘಂಟೆಗೇ ಜನರು ಕಾಯುತ್ತಿರುತ್ತಾರೆ. ಬಾಲಸೂರ್ಯನ ಕಿರಣಗಳಿಂದ ಸ್ವರ್ಣಶಿಖರಗಳಂತೆ ಇವು ಹೊಳೆಯುತ್ತಿರುವುದನ್ನು ನೋಡುವುದು ಅದೃಷ್ಟವಂತರು ಮಾತ್ರ. ಮೋಡಗಳು ದಯತೋರಿದರೆ ಈ ಅಪೂರ್ವ ದೃಶ್ಯವನ್ನು ನೋಡಬಹುದು. ನಮ್ಮ ಹೋಟಲಿನಿಂದಲೇ ಈ ಶಿಖರಗಳು ಸ್ವಲ್ಪ ಮಟ್ಟಿಗೆ ಗೋಚರಿಸುತ್ತಿದ್ದವು.

ಮುಕ್ತಿನಾಥ ಧಾಮ ನಮ್ಮ ಮುಂದಿನ ಲಕ್ಷ್ಯ. ಮರುದಿನ ಮುಂಜಾನೆಯೇ ಹೊರಟೆವು ಹೆಲಿಕಾಪ್ಟರ್‌ನಲ್ಲಿ. ಜೀವನದಲ್ಲಿ ಮೊದಲಬಾರಿ! ಇದೊಂದು ಅಪೂರ್ವ, ವಿಶಿಷ್ಟ, ಭಯಾನಕ ಅನುಭವ. ಕೆಳಗೆ ಆಳವಾದ ಪ್ರಪಾತ. ಸುತ್ತ ಉನ್ನತ ಶಿಖರಗಳು. ೩೦ ನಿಮಿಷದಲ್ಲಿ ಮುಕ್ತಿನಾಥ ತಲುಪಿತು ಹೆಲಿಕಾಪ್ಟರ್. ಆದರಿಂದ


ಮುಕ್ತಿನಾಥ

ಇಳಿದ ಮೇಲೆ ದೇವಸ್ಥಾನದವರೆಗಿನ ಪ್ರಯಾಣ ತುಂಬಾ ಕಡಿದಾದ ದಾರಿಯಲ್ಲಿ. ಸ್ಕೂಟರ್‌ನಲ್ಲಿ ಹೋಗಿ ಬರಲು ೫೦೦ ರೂಪಾಯಿ. ಬಹಳ ಅಂಜಿಕೆಯಾಗುತ್ತದೆ. ಪೊಖರಾದಲ್ಲೇ ಬಹಳ ಚಳಿ. ಇಲ್ಲಂತೂ ಚಳಿ ಎಲುಬಿನವರೆಗೂ ವ್ಯಾಪಿಸಿತ್ತು. ಇಲ್ಲಿ ೧೦೮ ತೀರ್ಥಗಳ ನೀರನ್ನು ಕೊಳವೆಗಳ ಮೂಲಕ ತಂದು ಯಾತ್ರಿಗಳ ಸ್ನಾನಕ್ಕಾಗಿ ಅನುವು ಮಾಡಿಕೊಟ್ಟಿದ್ದಾರೆ. ಸೊನ್ನೆ ಡಿಗ್ರಿ ತಾಪಮಾನದಲ್ಲಿ ಈ ಸ್ನಾನ ಬಹಳ ಕಷ್ಟಕರ. ಹಾಗಾಗಿ ಯಾರೂ ಸ್ನಾನಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಇದಲ್ಲದೇ, ಪಾಪದ ಕೊಳ ಮತ್ತು ಪುಣ್ಯದ ಕೊಳ ಎಂಬ ಇನ್ನೆರಡು ಕೊಳಗಳಲ್ಲೂ ಸ್ನಾನಮಾಡಿ ಪುನೀತ ರಾದೆವು. ಹತ್ತಿರದಲ್ಲೇ ಗಂಡಕೀ ನದಿ. ಈ ಪುಣ್ಯನದಿಯಲ್ಲೇ ಸಾಲಿ ಗ್ರಾಮಗಳು ದೊರೆಯುವುದು.

ಮುಕ್ತಿನಾಥ ದೇವಸ್ಥಾನ ತುಂಬಾ ಸುಂದರವಾಗಿದೆ. ಇಲ್ಲಿ ಅರ್ಚಕರಾಗಿ ಒಬ್ಬ ಮಹಿಳೆ ಇರುವುದು ಒಂದು ವಿಶೇಷ. ಪುಣ್ಯ ಶಾಲಿಗಳಿಗೆ ಮಾತ್ರ ಇಲ್ಲಿಯ ಯಾತ್ರೆ ಸಾಧ್ಯ.

ಪೊಖರಾದಿಂದ ಮನೋಕಾಮನಾದೇವಿ, ಜಲ ನಾರಾಯಣ, ಗುಪ್ತೇಶ್ವರ್ ಮತ್ತು ಭಕ್ತಪುರ ದೇವಾಲಯಗಳನ್ನೂ ದರ್ಶಿಸಿದೆವು. ನಂತರ ಕಾಠ್ಮಂಡುವಿಗೆ ವಾಪಸ್.

### ಮಾನಸ ಸರೋವರ ಯಾತ್ರೆ ಪ್ರಾರಂಭ

ಮರುದಿನ ಬೆಳಿಗ್ಗೆ ಕಾಠ್ಮಂಡುವಿನಿಂದ ಹವಾ ನಿಯಂತ್ರಿತ ಬಸ್ಸುಗಳಲ್ಲಿ 'ಸಾಗೋ' ಎಂಬಲ್ಲಿಗೆ ನಮ್ಮ ಪ್ರಯಾಣ. ಸುಮಾರು ೧೮೦ ಕಿ.ಮೀ. ದೂರ. ಅಲ್ಲಿಂದ ಮುಂದೆ 'ತಾತೋಪಾನಿ' ಎಂಬಲ್ಲಿ ಚೀನಾದ ಅಧಿಕಾರಿಗಳಿಂದ ದಾಖಲೆಗಳ ಪರಿಶೀಲನೆ ನಡೆಯಿತು. ಇಲ್ಲಿಂದ ಬಸ್ಸುಗಳ ಬದಲಾವಣೆ. ನೇಪಾಳದ ಬಸ್ಸುಗಳಿಗೆ ಟಿಬೆಟ್, ಚೀನಾಗಳಲ್ಲಿ ಪ್ರವೇಶವಿಲ್ಲ. ಅಲ್ಲಿಂದ ನ್ಯಾಲಂ ಎಂಬ ಊರಿನಲ್ಲಿ ನಮ್ಮ ಮುಂದಿನ ವಾಸ್ತವ್ಯ. ಅದು ಸಮುದ್ರ ಮಟ್ಟದಿಂದ ಸುಮಾರು ೧೨೦೦೦ ಅಡಿ ಎತ್ತರದಲ್ಲಿರುವುದರಿಂದ ವಾತಾವರಣದಲ್ಲಿ ಆಮ್ಲ ಜನಕದ ಪ್ರಮಾಣ ಕಡಿಮೆ. ಇಲ್ಲಿ ಡಾರ್ಮಿಟರಿಯಲ್ಲಿ ವಾಸ. ಎಲ್ಲ ವ್ಯವಸ್ಥೆಗಳು ಚೆನ್ನಾಗಿದ್ದವು. ಆದರೆ ಮೆಟ್ಟಿಲುಗಳನ್ನು ಹತ್ತಿ ಮೇಲೆ ಹೋಗುವಾಗ ಕೆಲವರಿಗೆ ಉಸಿರಾಟದಲ್ಲಿ ಏರುಪೇರು, ತಲೆ ಸುತ್ತಿದ ಅನುಭವ ! ಆದರೂ ಸುಧಾರಿಸಿಕೊಂಡರು. ಇಲ್ಲಿ ಅಗಾಧ ಚಳಿ. ನೀರು ಮುಟ್ಟಲು ಅಂಜಿಕೆ. ತಣ್ಣೀರು ಮುಟ್ಟಿದರೆ ಬೆರಳುಗಳು ಮರಗಟ್ಟುತ್ತವೆ. ಇಂತಹ ಪರಿಸ್ಥಿತಿಯಲ್ಲೂ ಆ ಶೆರ್ಪಾಗಳು ನೀಡುವ ಸೇವೆ ಸ್ಮರಣೀಯ.

ಮಾರನೆಯ ದಿನ ಉಪಹಾರದ ನಂತರ ಸನಿಹದ ಒಂದು ಬೆಟ್ಟ ಏರುವ ಅಭ್ಯಾಸ. ಇದು ಮುಂದಿನ ಪ್ರಯಾಣಕ್ಕೆ ಹಾಗೂ ವಾತಾವರಣಕ್ಕೆ ಹೊಂದಿಕೊಳ್ಳುವುದಕ್ಕೆ ಪೂರ್ವಭಾವಿ ಅಭ್ಯಾಸ. ಈ ಒಂದು ತರಹದ ಪ್ರಥಮ ಹಂತದ ಪರೀಕ್ಷೆ – ಮುಂದಿನ ಪ್ರಯಾಣಕ್ಕೆ ಅರ್ಹತೆಗೆ.

ಈ ಬೆಟ್ಟದ ಮೇಲೆ ಸಮತಟ್ಟಾದ ವಿಶಾಲವಾದ ಭೂಮಿ ಇದೆ. ಇಲ್ಲಿಂದ ಪ್ರಕೃತಿ ಸೌಂದರ್ಯ ವೀಕ್ಷಣೀಯ. ರಾಶಿ ರಾಶಿ ಬಣ್ಣ ಬಣ್ಣದ ಹೂಗಳ ಹಾಸಿಗೆ ಹೊದ್ದ ಬೆಟ್ಟಗಳು. ಜಲಪಾತಗಳು, ಹಿಮಾಚ್ಛಾದಿತ ಶಿಖರಗಳು, ಭೋರೆಂದು ಬೀಸುವ ಗಾಳಿ. ನಮ್ಮ ತಂಡದ ಪ್ರವಾಸಿಗಳೆಲ್ಲ ತುಂಬಾ ಆನಂದಿತರಾಗಿದ್ದರು. ಮುಂದಿನ ಪ್ರಯಾಣಕ್ಕೆ ಅರ್ಹರಾದ ಸಂತೋಷ ಎಲ್ಲರದೂ. ಕೆಲವರು ಹಾಡಿದರೆ, ಕೆಲವರು ಕುಣಿದಾಡಿ ಸಂಭ್ರಮಿಸಿದರು. ತುಂಬಾ ರೋಮಾಂಚಕಾರಿ ಸನ್ನಿವೇಶ. ಇದೊಂದು ಶಾಶ್ವತವಾಗಿ ಉಳಿದ ನೆನಪು.

### ನ್ಯಾಲಂನಿಂದ – ಪರ್ಯಾಂಗಕ್ಕೆ

ಮುಂದಿನ ಪ್ರಯಾಣ ಸಮತಟ್ಟಾದ ಬೋಳು ಬೋಳಾದ ಜಾಗದಲ್ಲಿ. ಕುರುಚಲು ಗಿಡಗಳು ಮಾತ್ರ. ಗಿಡಮರಗಳು ಕಾಣ ಬರುವುದಿಲ್ಲ. ಬರಿ ಗರಿಕೆ ತರಹದ ಹುಲ್ಲುಗಾವಲು. ಅದರಲ್ಲೇ ಚಂದದ ಹೂಗಳು. ಪರ್ಯಾಂಗ ೧೪೦೦೦ ಅಡಿ ಎತ್ತರ. ಅಲ್ಲಿರುವ ಒಂದು ಸರೋವರ ನಯನ ಮನೋಹರ. ಕಡುನೀಲಿ ಬಣ್ಣದ ನೀರು. ತುಂಬಾ ಸೊಗಸು.

ಇಂದು ನಮ್ಮ ವಾಸ ಪರ್ಯಾಂಗದಲ್ಲಿ. ಇದು ತುಂಬಾ ತಂಪು ಪ್ರದೇಶ. ತುಂಬಾ ಚಳಿ. ಹವಾಮಾನ ಅನಿಶ್ಚಿತ. ಇದ್ದಕ್ಕಿದ್ದಂತೆ ಮೋಡ ಕವಿದು ಮಳೆಯಾದರೆ, ಮರುಕ್ಷಣ ನಿಲ್ಲುತ್ತದೆ. ಅನಿರೀಕ್ಷಿತ ಹಿಮಪಾತ. ಇಲ್ಲಿಂದಲೇ ಕೈಲಾಸ ಪರ್ವತದ ಪ್ರಥಮ ದರ್ಶನ. ದಕ್ಷಿಣಾಮೂರ್ತಿಯ ದರ್ಶನ ಮನಸ್ಸಿಗೆ ತುಂಬಾ ಮುದ ನೀಡುತ್ತದೆ. ರೋಮಾಂಚಕಾರಿ ಅನುಭವ ಹಾಗೂ ಸಾರ್ಥಕ ಭಾವ.

ದಕ್ಷಿಣಾಮೂರ್ತಿಯ ಮೈಯಲ್ಲಿ ಉದ್ದುದ್ದ ರೇಖೆಗಳಿವೆ. ಇದನ್ನು ತ್ರಿನೇತ್ರ ರೇಖೆ ಎಂದೂ ಅರ್ಧನಾರೀಶ್ವರ ಎಂದು ಕರೆಯುತ್ತಾರೆ. ಅಡ್ಡ ಇರುವ ರೇಖೆಗಳನ್ನು ವಿಭೂತಿ ರೇಖೆಗಳೆನ್ನುತ್ತಾರೆ. ವೇದ-ಉಪನಿಷತ್ತುಗಳಲ್ಲಿ ಶಿವನು ೫ ಹೆಸರುಗಳಿಂದ ಕರೆಯಲ್ಪಡುತ್ತಾನೆ. ಮೊದಲ ನಾಲ್ಕು ಹೆಸರುಗಳು, ನಾಲ್ಕು ದಿಕ್ಕುಗಳನ್ನು ಸೂಚಿಸುತ್ತವೆ. ೫ನೆಯದು ಆಕಾಶ ತತ್ತ್ವವನ್ನು ಪ್ರತಿಪಾದಿಸುತ್ತದೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಮತ್ತು ಈಶಾನ ಇವೇ ಆ ತತ್ತ್ವಗಳು.

### ಮಾನಸ ಸರೋವರ

ಮಾನಸ ಸರೋವರಕ್ಕೆ ಪರಯಾಂಗ್ ನಿಂದ ೨೭೫ ಕಿ.ಮೀ. ಪ್ರಯಾಣ. ದಾರಿಯಲ್ಲಿ ಮಾಯೂಮ್-ಲಾ ಪಾಸ್ ತಲು ಪಲು ಅತ್ಯಂತ ಕಡಿದಾದ ದಾರಿಯಲ್ಲಿ ಹತ್ತಿ ಅಷ್ಟೇ ಕಡಿದಾದ ದಾರಿಯಲ್ಲಿ ಇಳಿಯಬೇಕು. ಆದರೂ ನೋಡಲು ಚಂದ. ಆಮ್ಲಜನಕದ ಕೊರತೆಯಾದರೂ ದಣಿವನ್ನೇನೂ ಯಾರೂ ತೋರಿಸಲಿಲ್ಲ. ಎಲ್ಲರ ಗಮನ ಮುಂದೆ ಬರಲಿರುವ ಮಾನಸ ಸರೋವರದತ್ತ! ಮಾರ್ಗದಲ್ಲಿ ಅಲ್ಲಲ್ಲಿ ಬೌದ್ಧರ ಪೂಜಾ ಸ್ಥಳಗಳನ್ನು, ಸಣ್ಣ ಸಣ್ಣ ಗುಡಿಗಳ ತರಹ ರಚನೆಗಳನ್ನು, ಬಣ್ಣಬಣ್ಣದ ತೋರಣಗಳನ್ನು, ಪತಾಕೆಗಳಿಂದ ಅಲಂಕೃತವಾದ ಪ್ರಾರ್ಥನಾಸ್ತಂಭಗಳನ್ನು ನೋಡಬಹುದು. ಕೊನೆಗೂ ಮಾನಸ ಸರೋವರ ಗೋಚರ. ಅದರ ಪಕ್ಕದಲ್ಲೇ ಬಸ್ಸು ನಿಲ್ಲುತ್ತದೆ. ಮಾನಸ ಸರೋವರವನ್ನು ಕಣ್ಣಾರೆ ಕಾಣುತ್ತಿದ್ದಂತೆ ಭಾವೋದ್ವೇಗಕ್ಕೆ ಒಳಗಾದೆವು. ಇದೊಂದು ಅಪೂರ್ವ ವರ್ಣಿಸಲಾಗದ ಸನ್ನಿವೇಶ. ಈ ಪ್ರದೇಶವನ್ನು 'ಟ್ಯುಗೊಂಪ' ಎಂದು ಕರೆಯುತ್ತಾರೆ.

ಮಾನಸ ಸರೋವರದ ನೀರು ಅಲ್ಲಿ ಸುತ್ತಮುತ್ತ ಇರುವ ಕೈಲಾಸ ಪರ್ವತ ಮತ್ತು ಇತರ ಪರ್ವತಗಳಿಂದ ಹಿಮ ಕರಗಿ ಶೇಖರಣೆಯಾದ ಪವಿತ್ರ ವಾರಿ. ಈ ನೀರಿನಲ್ಲಿ ಕಾಲಿಟ್ಟರೆ ರಕ್ತ ಹೆಪ್ಪುಗಟ್ಟುವ ಸಂಭವ. ಆದರೂ ಅದೇನೋ ವಿಶೇಷ ಆಕರ್ಷಣೆ. ಅನಿರ್ವಚನೀಯ ಅನುಭವ. ಇಲ್ಲಿ ಸಾಕ್ಷಾತ್ ಶಿವ-ಪಾರ್ವತಿಯರು ನೆಲೆಸಿದ್ದಾರೆ. ಈ ಸರೋವರದಲ್ಲಿ ರಾತ್ರಿ ದೇವತೆಗಳೇ ಸ್ನಾನ ಮಾಡುತ್ತಾರಂತೆ. ನಕ್ಷತ್ರರೂಪದಲ್ಲಿ ಬರುತ್ತಾರೆಂದು ಹೇಳುತ್ತಾರೆ. ರಾತ್ರಿ ಎಲ್ಲ ಕುತೂಹಲದಿಂದ ಕಾಯುತ್ತಿದ್ದ ನಾವು ಕಂಡ ದೃಶ್ಯ ಮರೆಯಲಾಗದ್ದು. ನಕ್ಷತ್ರಗಳು ಆಕಾಶದಿಂದ ಮಾನಸ ಸರೋವರಕ್ಕೆ ಧುಮುಕಿ ಮತ್ತೆ ಆಗಸದತ್ತ ನೆಗೆದು ಹೋದಂತೆ ಕಾಣುವ ಆ ದೃಶ್ಯ ದೇವದುರ್ಲಭ.

ಪವಿತ್ರವಾದ ಮಾನಸ ತಲುಪಿದಾಗ ಮಧ್ಯಾಹ್ನದ ಸಮಯ. ಬಸ್ಸಿನಿಂದ ಇಳಿಯುತ್ತಿದ್ದಂತೆ ನಮಗೆ ನೀರಿಗೆ ಇಳಿಯುವ ತವಕ. ಹೃದಯದಲ್ಲಿ ವರ್ಣಿಸಲಾಗದ ಭಾವಸ್ಫುರಣ. ಯಾವುದೋ ಲೋಕದಲ್ಲಿ ವಿಹರಿಸುತ್ತಿರುವ ಮನಸ್ಸು. ಶುದ್ಧ ಸ್ಫಟಿಕದಂತಹ ಜಲರಾಶಿ. ಸರೋವರ ತುಂಬಾ ವಿಶಾಲ. ಚಳಿಯನ್ನು ಲೆಕ್ಕಿಸದೆ ಎಲ್ಲರೂ ನೀರಿಗಿಳಿದೆವು. ತಾಯಿಯ ವಾತ್ಸಲ್ಯಪೂರ್ಣ ಅಪ್ಪುಗೆಯ ಹಿತಕರ ಅನುಭವ. ಅಲ್ಲೇ ಉಳಿಯಬೇಕೆಂಬ ಆಸೆ. ಎಲ್ಲೆಲ್ಲೂ ಭಗವಂತನ ಅಸ್ತಿತ್ವದ, ಸಾನ್ನಿಧ್ಯದ ಅನುಭವ. ಜೀವನ ಸಾರ್ಥಕ್ಯದ ಕ್ಷಣ.

ಮುಂದೆ ಸಾಂಗವಾಗಿ ಶಿವನನ್ನು ಪೂಜೆ ಮಾಡಿದೆವು. ಮರಳ ಲಿಂಗಕ್ಕೆ ರುದ್ರಾಭಿಷೇಕ, ಪೂಜೆ, ಶಿವಪಂಚಾಕ್ಷರಿ ಜಪ ಇತ್ಯಾದಿಗಳನ್ನು ಮಾಡಿ ಧನ್ಯರಾದೆವು. ಪವಿತ್ರ ತೀರ್ಥವನ್ನು ಜೋಪಾನವಾಗಿ ಸಂಗ್ರಹಿಸಿಟ್ಟುಕೊಂಡೆವು.

ಮಾನಸ ಸರೋವರ ೫೬ ಕಿ.ಮೀ. ವ್ಯಾಪ್ತಿಯ, ವಿಶಾಲ ಜಲರಾಶಿ. ಧನುಸ್ಸಿನ ಆಕಾರದಲ್ಲಿದೆ. ನಾಲ್ಕೂ ಕಡೆ ವೃಕ್ಷಗಳಿವೆ. ಸರೋವರದ ಮಧ್ಯ ಭಾಗ ಉಬ್ಬಿದಂತೆ ಕಾಣುತ್ತದೆ. ಅಲ್ಲಿ ನಾಗರಾಜನ ನಿವಾಸವಿದೆಯೆಂದು ನಂಬಿಕೆ. ಇವೆಲ್ಲ ನಂಬಿಕೆಗಳನ್ನು, ಪುಣ್ಯಕತೆಗಳನ್ನು ಹೊಂದಿರುವ ತಮ್ಮ ಭೂಮಿಯ ಬಗ್ಗೆ ಸ್ಥಾನೀಯರು ಬಹಳ ಆದರಾಭಿಮಾನಗಳನ್ನು ಹೊಂದಿದ್ದಾರೆ.

ಹತ್ತಿರದಲ್ಲೇ ರಾಕ್ಷಸ್ ತಾಲ್ ಎಂಬ ವಿಶಾಲ ಸರೋವರ ವಿದ್ದು ಇಲ್ಲಿ ರಾವಣ ತಪಸ್ಸು ಮಾಡಿದನೆಂದು ಪ್ರತೀತಿ. ಸಮುದ್ರ ಮಥನದ ಸಮಯದಲ್ಲಿ ಆದಿಶೇಷನ ವಿಷದಿಂದ ಈ ಸರೋವರ ವಿಷಮಯವಾಗಿದೆಯೆಂದೂ ಹೇಳುತ್ತಾರೆ. ಯಾರೂ ಈ ನೀರನ್ನು ಉಪಯೋಗಿಸುವುದಿಲ್ಲ. ಮೃಗಪಕ್ಷಿಗಳೂ ಇಲ್ಲಿ ಹಾರಾಡುವುದಿಲ್ಲ. ಇವೆರಡು ಸರೋವರಗಳು ಅಕ್ಕಪಕ್ಕದಲ್ಲೇ ಇದ್ದರೂ, ಸಮಾನ ಹವಾಮಾನ, ಪರಿಸ್ಥಿತಿಗಳಿದ್ದರೂ, ಎಷ್ಟೊಂದು ವ್ಯತ್ಯಾಸ ! ಸತ್ವ ಗುಣಕ್ಕೂ ತಮಸ್ಸಿಗೂ ಇರುವಷ್ಟು !

ನಂತರ ಟ್ರುಗ್ಗೊಂಪದಿಂದ ಚುಗೊಂಪಾಗೆ ಹೋಗಿ ತಂಗಿದೆವು. ಇದು ಮಾನಸ ಸರೋವರದ ತೀರದಲ್ಲೇ ಇರುವ ಒಂದು ತಾಣ. ಅಲ್ಲಿ ಹಾರಾಡುವ ಹಕ್ಕಿಗಳು ಕಾಣಸಿಗುತ್ತವೆ. ಸುತ್ತಲೂ ಹಿಮಾವೃತ ಪರ್ವತ ಶಿಖರಗಳು, ವಿಶಾಲವಾಗಿ ಹರಡಿರುವ ಮಾನಸ ಸರೋವರ ರಮಣೀಯವಾಗಿ ಕಾಣುತ್ತದೆ.

ಪೂಜೆ ಮುಗಿಸಿ ಹೊರಟವರು ೪೦ ಕಿ.ಮೀ.ದೂರದ ದಾರ್-ಚೆನ್ ಎಂಬ ಬೇಸ್ ಕ್ಯಾಂಪ್ ಗೆ ಬಂದು ತಲುಪಿದೆವು. ಇದು ಮಾನಸ ಸರೋವರಕ್ಕಿಂತ ೧೦೦೦ ಅಡಿ ಎತ್ತರ. ಇಲ್ಲಿಂದ ಮುಂದೆ ೭-೮ ಕಿ.ಮೀ. ದೂರದಲ್ಲಿ ಟ್ರೋಗೋ ಎಂಬ ಬೌದ್ಧ ದೇವಾಲಯವಿದೆ. ಆ ರಾತ್ರಿ ಬೇಸ್‌ಕ್ಯಾಂಪ್‌ನಲ್ಲೇ ಕಳೆದು ಮಾರನೆಯ ದಿನ ಯಮದ್ವಾರ ಎಂಬ ಸ್ಥಳಕ್ಕೆ ಬಂದೆವು.

ಯಮದ್ವಾರದ ಮೂಲಕ ಕೈಲಾಸ ಪರ್ವತದ ಪರಿಕ್ರಮ ಪ್ರಾರಂಭ. ಇಲ್ಲಿ ಮಹಾಮೃತ್ಯುಂಜಯ ಜಪ ಮಾಡಿ, ಆಂಜನೇಯನನ್ನು ಪ್ರಾರ್ಥಿಸಿದೆವು. ಕಮಾನಿನ ಆಕಾರದ ಈ ದ್ವಾರವನ್ನು ದಾಟಿದೊಡನೆಯೇ ಕೈಲಾಸ ಪರಿಕ್ರಮ ಪ್ರಾರಂಭ.

ಕೇವಲ ದೇಹ ಧಾರ್ಢ್ಯತೆಯಿಂದ ಮಾತ್ರ ಈ ಯಾತ್ರೆ ಸಾಧ್ಯವಾಗದು. ಪರಮಾತ್ಮನ ಪೂರ್ಣಕೃಪೆ ಇಲ್ಲದೆ ಇದು ಅಸಾಧ್ಯ ಎಂಬುದು ನಮ್ಮ ಯಾತ್ರೆಯಲ್ಲೇ ಗೊತ್ತಾಯಿತು.

ಇಲ್ಲಿಂದ ಮುಂದೆ ಶೆರ್ಪಾಗಳು ನಮ್ಮ ಜೊತೆ ಬರುವುದಿಲ್ಲ. ಮುಂದಿನ ಪರಿಕ್ರಮವನ್ನು ಕಾಲ್ನಡಿಗೆಯಿಂದಲೇ ಕ್ರಮಿಸಬಹುದು. ಇಲ್ಲದಿದ್ದರೆ ಕುದುರೆಗಳ ಸಹಾಯವನ್ನೂ ಪಡೆಯಬಹುದು. ಕಾಲ್ನಡಿಗೆಯಲ್ಲಿ ಸಾಗುವವರಿಗೂ ಸಹಾಯಕರಾಗಿ ಶೆರ್ಪಾಗಳನ್ನು ಪಡೆಯಬಹುದು. ಈ ಪರಿಕ್ರಮಕ್ಕೆ ೩ ಹಗಲು ಎರಡು ರಾತ್ರಿಗಳು ತಗಲುತ್ತವೆ. ನಾನು ಕುದುರೆಯ ಸಹಾಯ ಪಡೆದಿದ್ದೆ. ಜೊತೆಗೆ ಒಬ್ಬ ಹೆಣ್ಣುಮಗಳೂ ನನಗೆ ಸಹಾಯಕಿಯಾಗಿ ದೊರೆತಿದ್ದಳು. ಕುದುರೆ ನೋಡಿದ್ದೆನಾದರೂ ಅದನ್ನು ಸವಾರಿ ಮಾಡಿದ್ದು ಇದೇ ಮೊದಲು. ಇದು ನನ್ನಿಂದ ಸಾಧ್ಯವೇ ಎನ್ನಿಸಿತ್ತು. ಇದೊಂದು ಹೊಸ ಅನುಭವ.

**ಮೊದಲ ದಿನದ ಪರಿಕ್ರಮ:** ಇದು ಪರ್ವತಗಳ ನಡುವೆ ೧೬ ಕಿ.ಮೀ.ದೂರದ ಕಾಲುದಾರಿ. ಕುದುರೆಗಳಿಗೂ ಇದೇ ಮಾರ್ಗ. ಎಲ್ಲಿ ನೋಡಿದರೂ ಗಗನ ಚುಂಬಿ ಪರ್ವತಗಳು. ಸುಮಾರು ೧೫ ರಿಂದ ೧೬೦೦೦ ಅಡಿಗಳಷ್ಟು ಎತ್ತರದ ಪ್ರದೇಶ. ಸುಮಾರು ಒಟ್ಟು ಪರಿಕ್ರಮದ ೫೪ ಕಿ.ಮೀ. ದಾರಿಯಲ್ಲಿ, ೮ ಕಿ.ಮೀ.ನಷ್ಟು ದೂರವನ್ನು ಕೆಲವು ಕಡೆ ಕುದುರೆಯಿಂದ ಇಳಿದು ಕಾಲ್ನಡಿಗೆಯಲ್ಲೇ ಮಾಡಬೇಕಾಗುತ್ತದೆ.

ಪರಿಕ್ರಮದ ದಾರಿಯಲ್ಲಿ ಆಮ್ಲಜನಕದ ಅಭಾವ ಅನುಭವಕ್ಕೆ ಬರುತ್ತದೆ. ಉಸಿರಾಟಕ್ಕೆ ತೊಂದರೆಯಾಗುವ ಸಂಭವವೂ ಇರುತ್ತದೆ. ಈ ಮೊದಲ ದಿನದ ಪರಿಕ್ರಮದ ಮಧ್ಯದಲ್ಲಿ ಕೈಲಾಸ ಪರ್ವತದ ನೈಋುತ್ಯಮೂಲೆ ಹಾಗೂ ಪಶ್ಚಿಮದ ಮುಖದ ದರ್ಶನವಾಗುತ್ತದೆ. ಹಾಗೆಯೇ ಮುಂದುವರಿದು ಕೊನೆಯಲ್ಲಿ ದೀರಾಪುಕ್ ಎನ್ನುವ ಜಾಗಕ್ಕೆ ತಲುಪಿದಾಗ ಕೈಲಾಸನಾಥನ ಉತ್ತರ ಮುಖದ ದರ್ಶನವಾಗುತ್ತದೆ.

**ದೀರಾಪುಕ್:** ಈ ಪ್ರದೇಶದಲ್ಲಿ ಮಣ್ಣಿನ ಮನೆಗಳಲ್ಲಿ ತಂಗಬೇಕು. ಎಲ್ಲರಿಗೂ ಮಂಚಗಳ ಸೌಲಭ್ಯ ಲಭ್ಯ. ಹೊದೆಯಲು ರಜಾಯಿ ಸಿಗುತ್ತದೆ. ಪ್ರದೇಶದ ಉಷ್ಣಾಂಶ ಸೊನ್ನೆ ಡಿಗ್ರಿಗಿಂತ ಕಡಿಮೆ ಇರುತ್ತದೆ. ಭೋ ಎಂದು ಬೀಸುವ ತಂಗಾಳಿ. ಸುತ್ತಲೂ ಹಿಮ ಕರಗಿ ಹರಿಯುವ ನದಿಗಳ ಜುಳುಜುಳು ನಿನಾದ ! ಅತ್ಯಂತ ರಮಣೀಯ ಪ್ರದೇಶ. ಉತ್ತರ ಕೈಲಾಸ ದರ್ಶನ ಎಲ್ಲ ಮುಖಗಳಿಗಿಂತ ಸ್ಪಷ್ಟವಾಗಿ, ಸುಂದರವಾಗಿ ಹಾಗೂ ಸುಮನೋಹರವಾಗಿ ಕಾಣುತ್ತದೆ. ಈ ಮಣ್ಣಿನ ಮನೆಯಿಂದ ಅತ್ಯಂತ ಹತ್ತಿರದಿಂದ ಕೈಲಾಸ ಪರ್ವತ ಹಿಮದಿಂದ ಆವೃತವಾಗಿ ಶಿವನಿಗೆ ಮೋಡಗಳು ಹಾಲಿನ ಅಭಿಷೇಕ ಮಾಡುತ್ತಿರುವಂತೆ ಕಾಣುತ್ತದೆ. ಶೀತಲ ಗಾಳಿ ಬೀಸಿದಾಗ ಹಿಮಗಡ್ಡೆಗಳು ಕರಗಿ ಹರಿಯುವುದನ್ನು ನೋಡುವುದು ಅದ್ಭುತ ದೃಶ್ಯ. ಮರುದಿನ ಎದ್ದ ಸ್ವಲ್ಪ ಸಮಯದಲ್ಲೇ ಸೂರ್ಯನ ರೇಷ್ಮೆ ಕಿರಣಗಳು ಕೈಲಾಸ ಪರ್ವತವನ್ನು ಆವರಿಸಿಕೊಂಡು ಚಿನ್ನದ ಬಣ್ಣ ತಳೆದ ಅದ್ಭುತ ದೃಶ್ಯದ ಸೌಂದರ್ಯ ಅತ್ಯಂತ ರಮ್ಯ. ಮೋಡ ಮುಚ್ಚಿದಾಗ ಈ ದೃಶ್ಯ ಮರೆಯಾಗಿ ನಿರಾಶೆಯಾಗುವುದೂ ಇದೆ. ಕೈಲಾಸದ ಪೂರ್ಣ ದರ್ಶನಕ್ಕೆ ಶಿವನ ಕೃಪೆ ಬೇಕೇಬೇಕು.

ಪರಿಕ್ರಮದ ಎರಡನೇ ದಿನ ತುಂಬಾ ಕಷ್ಟಕರ. ಏಕೆಂದರೆ ೧೬೫೦೦ ಅಡಿಗಳಿಂದ ಒಮ್ಮೆಲೇ ೧೯೦೦೦ ಅಡಿಗಳವರೆಗಿನ ಚಾರಣ. ದೋಲ್ಮಾ ಪಾಸ್ ಅತ್ಯಂತ ಎತ್ತರ. ಇಲ್ಲಿ ಆಮ್ಲಜನಕದ ವಿರಳತೆ ಅತ್ಯಧಿಕ. ತುಂಬಾ ದುರ್ಗಮ ಪ್ರದೇಶ. ಇಲ್ಲಿ ಕುದುರೆಯಿದ್ದರೂ ಸ್ವಲ್ಪ ನಡೆಯಲೇಬೇಕಾಗುತ್ತದೆ. ಇಲ್ಲಿರುವ ಬಂಡೆಗಳಲ್ಲಿ ವಿಶ್ರಮಿಸಬೇಕಾಗುತ್ತದೆ. ಇವೇ ಬಂಡೆಗಳು, ಹಿಂದೆ ಸಹಸ್ರಾರು ಮಹಾಪುರುಷರ ಸ್ಪರ್ಶದಿಂದ ಪವಿತ್ರವಾದವುಗಳು. ಅವುಗಳ ಸ್ಪರ್ಶದಿಂದ ಯಾತ್ರಿಗಳೂ ಆಧ್ಯಾತ್ಮಿಕವಾಗಿ ಲಾಭಾನ್ವಿತರಾಗುವುದರಲ್ಲಿ ಸಂದೇಹವಿಲ್ಲ.

ದಾರಿಯಲ್ಲಿ ಇನ್ನೇನು ನಾವು ದೋಲ್ಮಾ ಪಾಸ್ ಹತ್ತಿರವಾಗುವಾಗ ಬಲಭಾಗದಲ್ಲಿ ಕೈಲಾಸ ಪರ್ವತದ ಹತ್ತಿರದ ಪರ್ವತ ವೃಂದಗಳಲ್ಲಿ ತುಂಬಾ ಆಕರ್ಷಣೀಯವಾಗಿ ಕಾಣುವ ಒಂದು ಪರ್ವತವಿದೆ. ಇದನ್ನು ಕೆಲವರು ಗೌರೀಪರ್ವತ ಎಂದು ಕರೆಯುತ್ತಾರೆ. ಇದರ ಬುಡದಲ್ಲೇ ಗೌರೀಕುಂಡ ಇರುವುದು. ದೋಲ್ಮಾ ಪಾಸ್ ಹಾಗೂ ಗೌರೀಕುಂಡ ತಲುಪಿದಾಗ ಪರಿಕ್ರಮವನ್ನೇ ಯಶಸ್ವಿಯಾಗಿ ಮುಗಿಸಿದ್ದೇವೇನೋ ಎನ್ನುವ ಭಾವನೆ. ಏಕೆಂದರೆ ೬ ಕಿ.ಮೀ. ದೂರದ ಎತ್ತರದದಾರಿ ಕ್ರಮಿಸುವುದಕ್ಕೆ ೬ ಘಂಟೆಗೂ ಹೆಚ್ಚಿನ ಸಮಯ ಬೇಕಾಗುತ್ತದೆ. ದೋಲ್ಮಾ ಪಾಸ್‌ನಿಂದ ಕೆಳಗಿಳಿದು ಬರುವಾಗ ಮೊದಲು ಗೌರೀಕುಂಡ ಸಿಗುತ್ತದೆ. ಇದು ಒಂದು ಕುಂಡ, ಎಂದರೆ ಕೊಡದ ಆಕಾರದಲ್ಲಿದೆ. ಅತ್ಯಂತ ಪವಿತ್ರವಾದ ನೀರಿನ ಕುಂಡ. ಆ ಪವಿತ್ರ ತಾಣವನ್ನು ಮುಟ್ಟಬರಬೇಕೆಂದರೆ ಆಳವಾದ ಪ್ರಪಾತಕ್ಕೆ ಇಳಿಯಬೇಕು. ಇಲ್ಲಿ ಇಳಿಯುವ ಯಾತ್ರಿಕರು ಬಹಳ ಅಪರೂಪ. ಅಷ್ಟು ಆಳಕ್ಕೆ ಇಳಿಯುವ ಶ್ರಮ ಸುಲಭಸಾಧ್ಯವಲ್ಲ. ಹಾಗಾಗಿ ಸಹಾಯಕರಿಂದಲೇ ಅಲ್ಲಿಯ ತೀರ್ಥವನ್ನು ತರಿಸಿಕೊಳ್ಳುತ್ತಾರೆ. ಇದಕ್ಕೆ ಸೂಕ್ತ ಸಂಭಾವನೆ ಕೊಡಬೇಕು.

ದೂರದಿಂದಲೆ ಈ ಸುಂದರ ಕುಂಡದ ಸೌಂದರ್ಯವನ್ನು ಕಣ್ತುಂಬಿಕೊಂಡೆವು. ಇಲ್ಲಿ ಸ್ವತಃ ಪಾರ್ವತಿ ದೇವಿ ಸ್ನಾನ ಮಾಡುವಳೆಂದು ನಂಬಿಕೆ.

ಗೌರೀಕುಂಡದಿಂದ ಮುಂದೆ ತೀವ್ರ ಇಳಿಜಾರು. ಕೆಳಗೆ ಇಳಿದು ಬರುವಾಗ ಆಮ್ಲಜನಕದ ಕೊರತೆ ಬಾಧಿಸುತ್ತದೆ. ೨ನೇ ದಿಂದ ಪರಿಕ್ರಮ ೨೨ ಕಿ.ಮೀ. ನಷ್ಟಿದ್ದು ದುರ್ಗಮವಾಗಿದ್ದರೂ, ಅತ್ಯಂತ ಕಷ್ಟದಾಯಕ ವಾದರೂ ಕೊನೆಗೆ ಒಂದು ಸಾರ್ಥಕತೆಯ, ವಿಜಯದ, ಸಾಹಸದ ಅನುಭವ ಸ್ಮೃತಿಪಟಲದಲ್ಲಿ ಚಿರಸ್ಥಾಯಿಯಾಗಿ ಉಳಿಯುತ್ತದೆ.

ಎರಡನೇ ದಿನದ ಪರಿಕ್ರಮ ಮುಗಿದು ನಾವು ತಂಗುವುದು – ಝುತುಲ್‌ಪುಕ್ ಎಂಬಲ್ಲಿ. ಈ ಜಾಗದಿಂದ ೩ ನೇ ದಿನದ ಪರಿಕ್ರಮ – ೧೦ ಕಿ.ಮೀ. ಮಾತ್ರ. ಹಿಂದಿನ ಎರಡು ದಿನಗಳಿಗೆ ಹೋಲಿಸಿದರೆ ಇದೇ ಸ್ವಲ್ಪ ಸುಲಭದ ದಿನ. ನಾವು ಕ್ರಮಿಸುವ ದಾರಿ ಸಮತಟ್ಟಾದ ಕಾಲು ದಾರಿ. ಹಿಂದಿನ ಶ್ರಮವನ್ನು ನೆನೆದಾಗ, ಪರಿಕ್ರಮ ಮುಗಿಯುತ್ತಿದೆ ಎಂಬ ಭಾವನೆಯಲ್ಲಿ ದಾರಿ ಸುಲಭವೆನಿಸುತ್ತದೆ. ೩ನೇ ದಿನದ ಪರಿಕ್ರಮದಲ್ಲಿ ಕೈಲಾಸ ಪರ್ವತದ ಪೂರ್ವದ ಭಾಗ ದರ್ಶನವಾಗುತ್ತದೆ. ಇದರ ಸ್ವಲ್ಪ ಅಂಶ ಮಾತ್ರ ಗೋಚರಿಸುವುದರಿಂದ ಮೋಡಗಳಿದ್ದರೆ ಅದು ನೋಡಲು ಸಿಗಲಾರದು. ಆದರೆ ಒಳ ಪರಿಕ್ರಮ ಮಾಡುವವರಿಗೆ ಪೂರ್ವ ದಿಕ್ಕಿನ ಪರ್ವತದ ಪೂರ್ಣ ದರ್ಶನ ಲಭ್ಯ.

ಕೊನೆಯಲ್ಲಿ ಕೈಲಾಸ ಪರ್ವತವನ್ನು ಕಂಡಾಗ ಇದ್ದಕ್ಕಿದ್ದಂತೆ ಕಣ್ಣುಗಳಿಂದ ಧಾರಾಕಾರವಾಗಿ ಅಶ್ರುಧಾರೆ ಹರಿಯಿತು. ನನ್ನ ಬಹುಕಾಲದ ಹಂಬಲ ಈ ರೀತಿ ಈಡೇರಿಸಿದ ನನ್ನ ಇಷ್ಟದೈವದ ಕೃಪೆಯನ್ನು ನೆನೆನೆನೆದು ಗದ್ಗದಿತಳಾದೆ. ಜೀವಮಾನದ ಅತ್ಯಂತ ಪುಣ್ಯಪ್ರದ, ಧನ್ಯತೆಯ, ಪವಿತ್ರ ಕ್ಷಣಗಳಿವು.

**ಕರಚರಣಕೃತಂ ವಾಕ್ಕಾಯಜಂ ಕರ್ಮಜಂ ವಾ**
**ಶ್ರವಣನಯನಜಂ ವಾ ಮಾನಸಂ ವಾಽಪರಾಧಮ್ ।**
**ವಿಹಿತಮವಿಹಿತಂ ವಾ ಸರ್ವಮೇತತ್ ಕ್ಷಮಸ್ವ**
**ಜಯ ಜಯ ಕರುಣಾಬ್ಧೇ ಶ್ರೀ ಮಹಾದೇವ ಶಂಭೋ ॥**

ಎಂದು ಪ್ರಾರ್ಥಿಸಿ ಕೈಲಾಸಯಾತ್ರೆಯ ಸವಿನೆನಪುಗಳೊಡನೆ ಮರುಪ್ರಯಾಣಕ್ಕೆ ಅನುವಾದೆ.

ಅದ್ಭುತವಾದ, ಅತ್ಯಂತ ಆನಂದದಾಯಕವಾದ, ಪರಮ ಪವಿತ್ರವಾದ, ಜೀವನಪರ್ಯಂತ ನೆನಪಿನಲ್ಲಿ ಉಳಿಯುವ ಅನುಭವ, ಕೈಲಾಸ ಮಾನಸ ಸರೋವರ ಯಾತ್ರೆ!

ಶಿವನ ಕೃಪೆಯಿಲ್ಲದೆ ಈ ಯಾತ್ರೆ ಸಾಧ್ಯವೇ ಇಲ್ಲ. ಮಾನಸೆಯನ್ನು, ಕೈಲಾಸವನ್ನು ಪುನಃ ಕಾಣುವ ಬಯಕೆ ಮತ್ತೆ ಕಾಡುತ್ತಿದೆ. ದೈವದೊಲುಮೆಯಿದ್ದರೆ ಸಾಧ್ಯವಾಗದಿರುವುದು ಏನಿದೆ? ✽